ಹೇಳುತ್ತೇನೆ – ದೊಡ್ಡನೆ ಮಾರಿಗೆ ಸಣ್ಣನೆ ಕುರಿಬಲಿಯಾದರೇನು; ಒಳಿತೇ ತಾನೇ... ಅಂತನ್ನಿಸಿತು. ಮಧುಕರಿಯನ್ನೂ ಒಪ್ಪಿಸಿ, ಮುಂದಿನೆರಡು ತಿಂಗಳಿನಲ್ಲಿ ಮದುವೆಯನ್ನೂ ಮಾಡಿ ಮಗಳನ್ನು ಮಾಸ್ಕೋಗಟ್ಟಿದ್ದಾಯಿತು. ಅಬ್ಬಾ... ಯಾಪರಿ ಪರಿಪಾಟಲಾಗಿತ್ತು, ಗೊತ್ತೆ?! ಐಕ್ಯಾಳ ಪರವಾಗಿ ಇವೊತ್ತಿಗೂ ನಾನು ಪ್ರಾರ್ಥಿಸುವುದೆಂದರೆ, ದೇವರೇ... ಇವಳ ತನುಮನಗಳನ್ನು ಮುಂದೆಂದೂ ದುರ್ಬುದ್ಧಿಗೊಲಿಯದಂತೆ ಕಾಪಾಡು.... ಎಂದೇ!

ಮದುವೆಯಾದ ವರ್ಷದೊಪ್ಪತ್ತಿಗೆಲ್ಲ ಐಕ್ಯಾ ಅವಳಿ ಮಕ್ಕಳನ್ನು ಹೆತ್ತಳು. ಒಂದೇ ರೂಪದ ಎರಡು ಹೆಂಗೂಸುಗಳು! ತಾನಿಯಾ ಮತ್ತು ವೋಲ್ಗಾ ಅಂತೆಂದು 'ಅಲ್ಲಿಯ' ಹೆಸರೇ ಆಯ್ದಿಟ್ಟುದಾಯಿತು. ಮೊಮ್ಮಕ್ಕಳು ನಾಲ್ಕನೇ ತಿಂಗಳಿನಲ್ಲಿರುವಾಗ, ಅನಿರುತಂ ನಮ್ಮಿಬ್ಬರನ್ನೂ ರಷಿಯಾಕ್ಕೆ ಕರೆಸಿಕೊಂಡ. ಮೂರು ತಿಂಗಳು ಒಡನಿದ್ದು, ಮಕ್ಕಳೊಡನೆ ಆಡಿ ನಲಿದು ಬಂದೆವು. ಅಲ್ಲಿರುವಾಗ, ಯಾವುದೋ ಕಾರಣಕ್ಕೆ ನಮ್ಮ ನಡುವೆ ಅಲೇಕ್ಸ್ಯನ ಪ್ರಸ್ತಾಪವುಂಟಾಗಿ, ಐ ಮೀನ್ – ಮಧುಕರಿಯೇ ಅಲೇಕ್ಸ್ಯನ ಹೆಸರೆತ್ತಿದಾಗ ಛುಪ್ಪ್... ಎಂದು ನಾನು ಒಡನೆಯೇ ಕಣ್ಸನ್ನೆಗೈದೆ. ಈ ಮಧುಕರಿ ಸುಮ್ಮನಿರಬೇಕಿತ್ತು ತಾನೇ? ಬೇಕೆಂದೇ ಮತ್ತೂ ಕುತೂಹಲ ತಾಳಿ, ಅಲೇಕ್ಸ್ಯನ ವಿಚಾರವನ್ನು ಇನ್ನೂ ದೊಡ್ಡದು ಮಾಡಿ ಆಡಿದ. ಸದ್ಯ... ಐಕ್ಯಾ ಸುಮ್ಮನಿದ್ದಳು. ಅಥವಾ, ತನ್ನ ಸದ್ಯದ ತಾಯ್ತನದೆದುರು ತನ್ನದೇ ಹಳೆಯ ಚೆಲ್ಲುಚೆಲ್ಲು 'ಕನ್ನೆ'ತನ ಗೌಣವೆನಿಸಿತೋ ಏನೋ, ಸುಮ್ಮಗಂತೂ ಉಳಿದಳು. ಇಷ್ಟಿದ್ದೂ, ಮಧುಕರಿಯಲ್ಲಿ ಕೆಟ್ಟ ಕುತೂಹಲದ ಝಲಕೊಂದು ಮಿಕ್ಕೇ ಇದ್ದಿತು. ಅವನೇ, ನಾನೆದುರಿಲ್ಲದಿರುವಾಗ ಐಕ್ಯಾಳಲ್ಲಿ, ವಿಷಯವೇನೆಂದು ಕೇಳಿ ತಿಳಿದುಕೊಂಡನಂತೆ... ಇಂಡಿಯಾಕ್ಕೆ ವಾಪಸು ಬಂದ ಮೇಲಷ್ಟೇ, ಅವನಿಗೆ ಎಲ್ಲವೂ ಗೊತ್ತಿದೆಯೆಂದು ನನಗೂ ಗೊತ್ತಾಯಿತು. ಆಗ ನಾನೂ, ಐಕ್ಯಾಳ ಅಲೇಕ್ಸ್ಯ ಪರಿಣಯದ ಬಗ್ಗೆ ಕತೆ ಹೇಳಿದ್ದೆ. ಆಶ್ಚರ್ಯದೊಡನೆ ಅವಾಕ್ಕಾಗಿದ್ದ! 'ಮೋದ್... ನಿನ್ನ ಮಗಳು ಮೊದಲಿನ ಹಾಗಿಲ್ಲ... ತಾಯ್ತನ ಅವಳಿಗೆ ಜವಾಬ್ದಾರಿ ತರಿಸಿದೆ... ಹೆಣ್ತನದ ಅರ್ಥವನ್ನು ವಿವರಿಸಿದೆ... ಹಳೆಯದೆಲ್ಲ ಸುಮ್ಮನೆ ಹುಡುಗಾಟ ಅಂತ ಮರೀಲಿಕ್ಕೆ ಹೇಳು ಅಂತ ಹೇಳಿದಳು...' ಎಂದು ನಕ್ಕಿದ್ದ.

'ಈಗ ತಮಾಷೆ ಅನಿಸುತ್ತೆ, ಮಧೂ... ಆದರೆ ಇವಳು ತನ್ನ ಹಿಂದೆ ಬಿದ್ದಿದಾಳೇಂತ ಅಲೇಕ್ಸ್ಯನಿಗೆ ಗೊತ್ತಾಗಿದ್ದಿದ್ದರೆ ನನ್ನ ಪರಿಸ್ಥಿತಿ ಏನಾಗಿದ್ದಿರಬೇಡ?'

'ಏನಾಗಿರುತಿತ್ತು? ಅವನಿಗೂ ಇಷ್ಟವಾಗಿದ್ದಿದ್ದರೆ ನಾನೇ ಮುಂದೆ ನಿಂತು ಮದುವೆ ಮಾಡುತಿದ್ದೆ... ಅಷ್ಟೆ!'

'ಮಧೂ... ಇದೇ ನಿಂಗೆ ನಾನು ಹೇಳೋದೂ... ಅಲೇಕ್ಸ್ಯನ ವಯಸ್ಸೇನು, ಇವಳ ವಯಸ್ಸೇನು? ಆಗಬಹುದಾದ ಮಾತಾ ಇದು?'

'ವೆಲ್ಲ್... ಎಲ್ಲ ರೀತಿಯಲ್ಲೂ ಮದುವೆ ಅರ್ಹ ಅಂತ ನೀನೇ ಹೇಳುತಿರುತೀಯಲ್ಲ, ಮೋದ್...'

'ಹಾಗಂತ, ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನ ಕೊಟ್ಟು ಅಳಿಯನ್ನ ಮಾಡಿಕೊಳ್ಳೋದಾ? ಅವನು ನನಗೊಬ್ಬ ಒಳ್ಳೇ ಸ್ನೇಹಿತ ಅಷ್ಟೆ...'

'ಅದ್ಸರೀ... ಅವನೇಕೆ ಈವರೆಗೆ ಮದುವೆ ಮಾಡಿಕೊಂಡಿಲ್ಲ? ವೈ ಈಸ್ ಹೀ ಅ ಬ್ಯಾಚೊಲೊರ್ ಟಿಲ್ ನವ್?'

ಮಧುಕರಿಯ ಈ ಪ್ರಶ್ನೆ ನನ್ನನ್ನು ಕಸಿವಿಸಿಗೊಳಿಸಿತ್ತು. ಹೌದು... ಅಲೇಕ್ಸ್ಯನೇಕೆ ಈವರೆಗೆ ಮದುವೆಯಾಗಿಲ್ಲ? ನನ್ನ ವಯಸ್ಸಿನ ಲೆಕ್ಕದಲ್ಲಿ ನೋಡಿದರೆ, ಅವನಿಗೀಗ ನಲವತ್ತಾರಿದ್ದೀತಷ್ಟೆ?